ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೋರಿರುವಂತೆ ಉಡುಪಿಯಿಂದ ಸಾಜೆ ೭ ಗಂಟೆಗೆ ಬಿಡುವ ಉಡುಪಿ–ಮೈಸೂರು–ಬೆಂಗಳೂರು ಬಸ್ಸನ್ನು ಇನ್ನು ಮುಂದೆ ರಾಮನಗರದಲ್ಲಿ ನಿಲುಗಡೆ ಕೊಡಲಾಗುವುದು.

(೯) ಐ.ಟಿ.ಐ.ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮತ್ತಿತರ ಆಪ್ರೆಂಟೀಸ್‌ಗಳಿಗೆ ಬಸ್‌ಪಾಸ್ ಸೌಲಭ್ಯ ಒದಗಿಸುವ ಬಗ್ಗೆ

ಶ್ರೀ ವಸಂತ ವಿ. ಸಾಲಿಯಾನ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಾರ್ಖಾನೆ ಕಛೇರಿಗಳಲ್ಲಿ ಆಪ್ರೆಂಟೀಸ್ ತರಬೇತಿ ಹೊಂದುತ್ತಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ಬಸ್‌ಪಾಸ್ ಸೌಲಭ್ಯ ಸಿಗುತ್ತಿಲ್ಲ. ಈ ಸೌಲಭ್ಯ ಆಪ್ರೆಂಟೀಸ್‌ಗಳಿಗೂ ಕೂಡ ಸಿಗಬೇಕು. ಆದೇರೀತಿ ಪುತ್ತೂರಿನಲ್ಲಿ ಐ.ಟಿ.ಐ. ಇನ್ಸ್‌ಟ್ಯೂಟ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಸರಕಾರ ಬಸ್‌ಪಾಸ್ ಸೌಲಭ್ಯ ಒದಗಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಆಪ್ರೆಂಟೀಸ್ ವಿದ್ಯಾರ್ಥಿಗಳು ಸರ್ಕಾರದಿಂದ ವೇತನ (ಸ್ಟೈಫಂಡ್) ಪಡೆಯುವುದರಿಂದ ಇವರನ್ನು ವಿದ್ಯಾರ್ಥಿಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಈ ಆಪ್ರೆಂಟೀಸ್‌ಗಳು ಈಗಾಗಲೇ ವಿದ್ಯಾಭ್ಯಾಸದ ಅವಧಿಯನ್ನು ಮುಗಿಸಿದ್ದು ಉದ್ಯೋಗಕ್ಕೆ ಅರ್ಹರಾಗಿದ್ದಾರೆ. ಐ.ಟಿ.ಐ. ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಈ ವಿದ್ಯಾಭ್ಯಾಸ ಮುಗಿಯುವವರೆಗೆ ಉದ್ಯೋಗಕ್ಕೆ ಅನರ್ಹರು. ಮೇಲೆ ಹೇಳಿರುವ ವಿವರಣೆಯಿಂದ ಐ.ಟಿ.ಐ. ಆಪ್ರೆಂಟೀಸ್ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸ್‌ಗಳನ್ನು ಕೊಡಲಾಗುತ್ತಿಲ್ಲ.

ಪುತ್ತೂರಿನ ಐ.ಟಿ.ಐ. ವಿದ್ಯಾರ್ಥಿಗಳ ರಿಯಾಯಿತಿ ಪಾಸ್‌ಗಳನ್ನು ಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

(೧೦) ಕ. ರಾ. ರ. ಸಾರಿಗೆ ಸಂಸ್ಥೆಯು ಮಂಗಳೂರಿನಲ್ಲಿ ಬೇರೆ ಬೇರೆ ಕಡೆಯು ಬಸ್ ನಿಲುಗಡೆ ವ್ಯವಸ್ಥೆ ಮಾಡುವ ಬಗ್ಗೆ

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಮಾನ್ಯ ಇದಿನಬ್ಬ ಅವರು ಇದೇ ನಿಯಮದಂತೆ ಕೇಳಿದ ಪ್ರಶ್ನೆಗೆ ನನ್ನ ಉತ್ತರ ಈ ರೀತಿ ಇದೆ :—

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮಂಗಳೂರಿನಲ್ಲಿ ತನ್ನ ಸ್ವಂತ ಬಸ್ ನಿಲ್ದಾಣವನ್ನು ಹೊಂದಿರುವುದಿಲ್ಲ. ಹಂಪನಕಟ್ಟೆಯ ಒಂದು ಚಿಕ್ಕ ಪ್ರದೇಶವನ್ನು ತನ್ನ ಬಸ್ಸುಗಳಿಗೆ ನಿಲ್ದಾಣವಾಗಿ ಉಪಯೋಗಿಸಿಕೊಳ್ಳುತ್ತಿದ್ದು, ಈ ಪ್ರದೇಶವು ಬಹಳಷ್ಟು ಜನನಿಬಿಡ ಪ್ರದೇಶವಾಗಿರುತ್ತದೆ. ಆದ್ದರಿಂದ ಹಂಪನಕಟ್ಟೆಯ ಹಳೆಯ ಬಸ್ ನಿಲ್ದಾಣದಿಂದ ಮೂರು ಕಿಲೋಮೀಟರ್ ದೂರದಲ್ಲಿರುವ ಬಿಜೈನಲ್ಲಿ ಬಸ್ ನಿಲ್ದಾಣವನ್ನು ಸ್ಥಾಪಿಸಲಾಯಿತು. ಎಲ್ಲಾ ಪ್ರಮುಖ ಕಛೇರಿಗಳು ಮತ್ತು ವಿದ್ಯಾಸಂಸ್ಥೆಗಳು ಬಿಜೈಗೆ ಸಮೀಪವಾಗಿರುತ್ತವೆ. ಈ ಹೊಸ ನಿಲ್ದಾಣಕ್ಕೆ ಮಂಗಳೂರು ಬಂದರು ಕೂಡ ಸ್ವಲ್ಪ ಅಂತರದ ದೂರವಿರುತ್ತದೆ. ಬಿಜೈಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ವರ್ಗಾಯಿಸಿದ್ದರಿಂದ ಶೇ. ೭೫ಕ್ಕೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲಕರವಾಗಿದೆ. ಹಂಪನಕಟ್ಟೆಯಲ್ಲಿ ವಾಪಸಿನ ನಿಲ್ದಾಣಗಳು ಬಿಜೈಗೆ ಹೋಗಿ ಬರಲು ತೊಂದರೆಯಾಗಿರುವುದರಿಂದ ಪಿ.ವಿ.ಎಸ್. ಬಿಲ್ಡಿಂಗ್‌ನ ಸಮೀಪ ಒಂದು ವಾಹನ ನಿಲುಗಡೆಯನ್ನು ಕೊಡಲಾಗಿದ್ದು, ಇದು ಹಳೆಯ ಬಸ್ ನಿಲ್ದಾಣಕ್ಕೆ ಕೇವಲ ಅರ್ಧ ಕಿಲೋಮೀಟರ್‌ನಷ್ಟು ದೂರವಿದ್ದು ಮತ್ತು ಜ್ಯೋತಿ ಸಿನಿಮಾದ ಹಿತ್ತಿರ ಮತ್ತೊಂದು ವಾಹನ ನಿಲುಗಡೆಯನ್ನು ಒದಗಿಸಲಾಗಿದ್ದು, ಇದು ಹಂಪನಕಟ್ಟೆಯ ಹಳೆಯ ಬಸ್ ನಿಲ್ದಾಣಕ್ಕೆ ಒಂದು ಕಿಲೋಮೀಟರ್ ಒಳಗಡೆ ಇರುತ್ತದೆ. ಹಂಪನಕಟ್ಟೆಯ ಪ್ರಯಾಣಿಕರಿಗೆ ಈ ವಾಹನ ನಿಲುಗಡೆಯ ಸ್ಥಳಗಳಿಂದ ಕೊಂಡೊಯ್ಯಲು ಮತ್ತು ಬಂದು ಇಳಿಯುವ ಅನುಕೂಲಗಳನ್ನು ಕಲ್ಪಿಸಿಕೊಡಲಾಗಿದೆ. ಕೊಡಿಯಾಲ್ ಬೈಲ್‌ನಿಂದ ಹಂಪನಕಟ್ಟೆಯ ಪೂರ್ವವು ಏಕ ಮುಖ ಮಾರ್ಗವಾಗಿರುವುದರಿಂದ ಹಂಪನಕಟ್ಟೆಯ ಬಸ್ ನಿಲ್ದಾಣದ ಮಾರ್ಗವಾಗಿ ಬಿಜೈಗೆ ಸಾರಿಗೆ ಸೇವೆ ಒದಗಿಸಲು ಅಸಾಧ್ಯವಾಗಿದೆ.